ದಿನಾಂಕಃ 22.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ <u>ಪಾಟೀಸವಾಲುಃ1 ರಿಂದ 3ನೇ ಪ್ರತಿವಾದಿಯರ ಪರ ಶ್ರೀ. ಎಸ್ .ಬಿ. ಹೆಚ್ ವಕೀಲರಿಂದಃ</u>**

ನನಗೆ ಕನ್ನಡ ಓದಲು-ಬರೆಯಲು ಬರುತ್ತದೆ. ನಿಡಿ1 ನ್ನು ಸಾಕ್ಷಿಗೆ ತೋರಿಸಿ ಅದು ದಿನಾಂಕ 19.10.2019 ರಂದು ಆಗಿದ್ದು, ಸದರೀ ಪತ್ರದಲ್ಲಿ 39 ಗುಂಟೆ ಜಮೀನಿನ ಕಿಮ್ಮತ್ತು 11 ಲಕ್ಷ ರೂ. ತೋರಿಸಿರುತ್ತಾರೆಂದರೆ ನಿಜ. ನಾನು ನಿಪಿ.1 ರಂತೆ ಖರೀದಿ ಕರಾರು ಪತ್ರ ಬರೆಸಿಕೊಳ್ಳುವ ಕಾಲಕ್ಕೆ ದಾವಾಸ್ತಿಯ 15 ವರ್ಷಗಳ ಋಣಭಾರರಾಹಿತ್ಯ ಪ್ರಮಾಣಪತ್ರವನ್ನು ತೆಗೆಸಿ ನೋಡಿರುವುದಿಲ್ಲ.

ನನಗೆ ಕಲ್ಲೋಳ್ಳಿ ಗ್ರಾಮದಲ್ಲಿ ಒಟ್ಟು 02 ಎಕರೆ ಜಮೀನು ಇರುತ್ತದೆ. ಸರ್ವೆ ನಂಬರ 36/2ಎ ರಲ್ಲಿ 20 ½ ಗುಂಟೆ ಜಮೀನು ಇರುತ್ತದೆ. ಸದರೀ ಜಮೀನಿನ ಮೇಲೆ ಸನ್ 2021-22 ನೇ ಸಾಲಿನಲ್ಲಿ ರೂ.80 ಸಾವಿರ, ರೂ.40 ಸಾವಿರ, ರೂ. 10 ಲಕ್ಷ ಸಾಲ ಇರುವ ಬಗ್ಗೆ ಪಹಣಿಪತ್ರಿಕೆಯಲ್ಲಿ ಬೋಜಾ ದಾಖಲು ಇರುತ್ತದೆಂದರೆ ನಿಜ. ಸನ್ 2021-22 ನೇ ಸಾಲಿನ ಸದರೀ ಸರ್ವೆ ನಂಬರನ ಪಹಣಿಪತ್ರಿಕೆಯಲ್ಲಿ ಯಾವುದೇ ಬೆಳೆ ಇರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ನಿಜ. ಅದೇ ರೀತಿ ಸನ್ 2021-22 ನೇ ಸಾಲಿನ ಸರ್ವೆ ನಂಬರ 28 ರ ಪಹಣಿಪತ್ರಿಕೆಯಲ್ಲಿ ನನ್ನ ಹೆಸರಿಗೆ 8 ½ ಗುಂಟೆ ಜಮೀನು ಇರುತ್ತದೆಂದರೆ ಸಾಕ್ಷಿಯು 23 ½ ಗುಂಟೆ ಜಮೀನು ಇರುತ್ತದೆಂದು ನುಡಿಯುತ್ತಾರೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರೀ ಜಮೀನಿನ ಮೇಲೆ ಸಹ ರೂ. 1,25,000/- ಹಾಗೂ ರೂ. 10,00,000/- ಸಾಲ ಇರುವ ಬಗ್ಗೆ ಪಹಣಿಪತ್ರಿಕೆಯಲ್ಲಿ ಬೋಜಾ ದಾಖಲು ಇರುತ್ತದೆಂದರೆ ನಿಜ.

ಅದೇ ರೀತಿ ಸನ್ 2021-22 ನೇ ಸಾಲಿನ ಸರ್ವೆ ನಂಬರ 37/2ಬಿ+2ಎ/1 ರ ಪಹಣಿಪತ್ರಿಕೆಯಲ್ಲಿ ನನ್ನ ಹೆಸರಿಗೆ 30 ಗುಂಟೆ ಜಮೀನು ಇರುತ್ತದೆಂದರೆ ನಿಜ.

ಸದರೀ ಜಮೀನಿನ ಮೇಲೆ ಸಹ ರೂ. 30,000/-, ರೂ. 80,000/-, ರೂ. 80,000/- ಹಾಗೂ ರೂ. 10,00,000/- ಸಾಲ ಇರುವ ಬಗ್ಗೆ ಪಹಣಿಪತ್ರಿಕೆಯಲ್ಲಿ ಬೋಜಾ ದಾಖಲು ಇರುತ್ತದೆಂದರೆ ನಿಜ. ಸದರಿ ಪಹಣಿಪತ್ರಿಕೆಯಲ್ಲಿ ಬೆಳೆ ಇರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ನಿಜ ಆದರೆ ಬೆಳೆ ಬೆಳೆಯುತ್ತೇವೆ ಎಂದು ನುಡಿಯುತ್ತಾರೆ.

ನಾನು ಒಕ್ಕಲುತನದೊಂದಿಗೆ ದನಗಳ ಹಿಂಡಿ ವ್ಯಾಪಾರವನ್ನು ಸಹ ಮಾಡುತ್ತೇನೆ. ನಾನು ಸಿಮೆಂಟ ವ್ಯಾಪಾರವನ್ನು ಸಹ ಮಾಡುತ್ತೇನೆ. ಸದರೀ ಅಂಗಡಿಯನ್ನು ನಾನು ಸಂಗನಕೇರಿಯಲ್ಲಿ 10 ವರ್ಷಗಳಿಂದ ನಡೆಸುತ್ತಿದ್ದೇನೆ. ಸದರೀ ವ್ಯಾಪಾರದ ಬಗ್ಗೆ ದಾವೆ ಹಾಕುವ ಕಾಲಕ್ಕೆ ವಕೀಲರಿಗೆ ಮಾಹಿತಿ ನೀಡಿರುವುದಿಲ್ಲ. ಆ ಬಗ್ಗೆ ಮಾಹಿತಿಯನ್ನು ನೀಡಿ ದಾವೆಯಲ್ಲಿ ಬರೆಸಲು ತೊಂದರೆ ಇರಲಿಲ್ಲ ಎಂದರೆ ನಿಜ. ಸದರೀ ವ್ಯಾಪಾರದಲ್ಲಿ ವಾರ್ಷಿಕ ರೂ.2 ರಿಂದ 03 ಲಕ್ಷ ಟರ್ನ ಒವರ್ ಆಗುತ್ತದೆ. ಸದರೀ ವ್ಯಾಪಾರದಿಂದ ನನಗೆ ವಾರ್ಷಿಕ ರೂ.40 ಸಾವಿರ ಆದಾಯ ಇರುತ್ತದೆ. ಸದರೀ ವ್ಯಾಪಾರಕ್ಕೆ ನಾನು ರೂ.05 ಲಕ್ಷ ಬಂಡವಾಳ ಹಾಕಿರುತ್ತೇನೆ. ಸದರೀ ವ್ಯಾಪಾರ ಮಾಡಲು ಜಿ.ಎಸ್. ಟಿ ನಂಬರ ಪಡೆದಿರುತ್ತೇನೆ. ಸದರೀ ವ್ಯವಹಾರದ ಕುರಿತು ಆದಾಯ ತೆರಿಗೆಯನ್ನು 10 ವರ್ಷಗಳಿಂದ ಸಲ್ಲಿಸುತ್ತಾ ಬಂದಿರುತ್ತೇನೆ. ಆ ಬಗ್ಗೆ ನನ್ನ ಬಳಿ ದಾಖಲೆಗಳು ಇರುತ್ತವೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನನ್ನ ಆದಾಯ ತೆರಿಗೆಯಲ್ಲಿ ನಿಪಿ.1 ರಂತೆ ಮಾಡಿಕೊಂಡ ವ್ಯವಹಾರದ ಬಗ್ಗೆ ನಮೂದಿಸಿರುವುದಿಲ್ಲ. ಆ ಬಗ್ಗೆ ತೋರಿಸಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ನಿಜ.

ಬ್ಯಾಂಕಿನ ಚೆಕ್ಕನ್ನು ನಾನು ಹುಡುಕಾಡಿಸಿರುವುದಿಲ್ಲ. ನಾನು ಹೇಳಿದಂತೆ ಪ್ರತಿವಾದಿಗೆ ಯಾವುದೇ ಚೆಕ್ಕನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯು ಪ್ರತಿವಾದಿಗೆ ಯಾವ ನಾತೆಯಿಂದ ಬಂದಿರುತ್ತದೆಂದು

ವಿಚಾರಿಸಿರುತ್ತೇನೆ. ಪ್ರತಿವಾದಿಯರು ಏನು ತಕರಾರು ಸಲ್ಲಿಸಿರುತ್ತಾರೆಂದು ಕೇಳಿ ತಿಳಿದುಕೊಂಡಿರುವುದಿಲ್ಲ.

ದಾವಾಸ್ತಿಯು ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಇರುತ್ತದೆಂದರೆ ನನಗೆ ಗೊತ್ತಿಲ್ಲ. ಖರೀದಿ ಕರಾರು ಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ದಾವಾಸ್ತಿಯಲ್ಲಿ ಪ್ರತಿವಾದಿಯರನ್ನು ಹೊರತುಪಡಿಸಿ ಮತ್ತೆ ಬೇರೆ ಯಾರದ್ದು ಹಕ್ಕು ಇರುತ್ತದೆಂದು ನಾನು ವಿಚಾರಿಸಿರುವುದಿಲ್ಲ. ಆ ಬಗ್ಗೆ ವಿಚಾರಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಉತಾರೆಯನ್ನು ನೋಡಿರುತ್ತೇನೆಂದು ನುಡಿಯುತ್ತಾರೆ.

ಸನ್ 2016 ಮತ್ತು 2019 ರಲ್ಲಿ ಬಾಳೇಶ ದಾಸನವರ ಹೆಸರಿಗೆ ಮಾಡಿಕೊಟ್ಟ ಖರೀದಿ ಕರಾರು ಪತ್ರದಲ್ಲಿ 39 ಗುಂಟೆ ಜಮೀನಿನ ಕಿಮ್ಮತ್ತು ರೂ.11 ಲಕ್ಷ ಇರುವ ಬಗ್ಗೆ ನನಗೆ ಗೊತ್ತಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆದ್ದರಿಂದ ಪ್ರತಿವಾದಿಯರು ಕೇವಲ ರೂ.5,50,000/- ಗಳಿಗೆ ದಾವಾಸ್ತಿಯನ್ನು ಮಾರಾಟ ಮಾಡುವ ಯಾವುದೇ ಉದ್ದೇಶ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಸನ್ 2020-21 ರಲ್ಲಿ ದಾವಾಸ್ತಿಯ ಮೌಲ್ಯ ಸುಮಾರು 25 ರಿಂದ 30 ಲಕ್ಷ ರೂ. ಆಗುತ್ತಿತ್ತು ಎಂದರೆ ಸರಿಯಲ್ಲ. ನಾನು, ಬಾಳೇಶ ದಾಸಪ್ಪನ್ನವರ ಹಾಗೂ ಇನ್ನೂಳಿದ ಸಾಕ್ಷಿದಾರರು ಸೇರಿಕೊಂಡು ಪ್ರತಿವಾದಿಯರ ಕಿಮ್ಮತ್ತಿನ ಜಮೀನನ್ನು ಹೊಡೆಯಬೇಕೆಂಬ ದುರಾಸೆಯಿಂದ ಸುಳ್ಳು ಖರೀದಿ ಕರಾರು ಪತ್ರವನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವೆ ಹಾಕುವ ಕಾಲಕ್ಕೆ ನಿಪಿ.1 ರಂತೆ ಉಳಿದ ರೂ.50 ಸಾವಿರ ವನ್ನು ತುಂಬಲು ನ್ಯಾಯಾಲಯದ ಪರವಾನಿಗೆ ಪಡೆದುಕೊಂಡಿರುವುದಿಲ್ಲ. ಆ ಬಗ್ಗೆ ಅರ್ಜಿ ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ನಿಜ.

ಪ್ರತಿವಾದಿಯರು ನನಗೆ ಸುಮಾರು 10 ವರ್ಷಗಳಿಂದ ಪರಿಚಯ. ಅವರ ಮನೆತನದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಅವರ ಕುಟುಂಬಕ್ಕೆ ಸಂಬಂಧಿಸಿದಂತೆ ಯಾವುದೇ ಹಿರಿತನ ಮಾಡಿರುವುದಿಲ್ಲ. ನನ್ನ ವಾದಪತ್ರದಲ್ಲಿ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುವ ವಿಷಯಗಳು ಸುಳ್ಳಿನಿಂದ ಕೂಡಿದ್ದು, ಪ್ರತಿವಾದಿಯರ ಆಸ್ತಿಯನ್ನು ಹೊಡೆಯಬೇಕೆಂದು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

3 ನೇಪ್ರತಿವಾದಿಯ ಗಂಡನ ಹೆಸರು ಚೂನಪ್ಪ ಅರಬಾಂವಿ ಎಂದು ಇರುತ್ತದೆ. 4 ನೇ ಪ್ರತಿವಾದಿಯ ಗಂಡನ ಹೆಸರು ನನಗೆ ಗೊತ್ತಿಲ್ಲ. 2 ನೇಪ್ರತಿವಾದಿಯ ಗಂಡನ ಹೆಸರು ಮಲ್ಲಪ್ಪ ಅರಬಾಂವಿ ಇರುತ್ತದೆ. 1 ನೇ ಪ್ರತಿವಾದಿಯ ಗಂಡನ ಹೆಸರು ನನಗೆ ಗೊತ್ತಿಲ್ಲ. ಅವಳ ಅಡ್ಡ ಹೆಸರು ಸಹ ನನಗೆ ಗೊತ್ತಿಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ